


ಎಡದಿಂದ ಬಲಕ್ಕೆ :

1. ನೀರಿಗಾಗಿ ನಡೆದ ಭಾರೀ ಯುದ್ಧದಲ್ಲಿ ಶಸ್ತ್ರಾಸ್ತ್ರ ಒಂದೂ ಇಲ್ಲ! 4
3. ಇಡೀ ದೇವಾಲಯಕ್ಕೆ ಹಚ್ಚಿರುವುದು ಶುದ್ಧ ಬಿಳುಪಿನ ಬಣ್ಣ 3
4. ನಿರಂಜನ ಪ್ರತ್ಯಕ್ಷವಾಗುವ ವೇಳೆಗೆ ರಾತ್ರಿಯಾಗಿತ್ತು 3
6. ದಾಕ್ಷಿಣ್ಯಕ್ಕೆ ಬಲಿಯಾಗಿ ದೊಣ್ಣೆ ಹಿಡಿದರೆ ಸೇನಾನಿಯಾದಾನೇ? 4
8. ಆ ಕಾರ್ಖಾನೆಯ ಎಲ್ಲ ಲೆಕ್ಕಗಳನ್ನೂ ಬರೆಯುವವ ಈತ 4
10. ಥಳುಕಿನ ಲವಲೇಶವೂ ಇಲ್ಲದ ಪರಿಶುದ್ಧ ಸ್ನೇಹ 4
12. ರಂಗದ ಮೇಲೆ ಗೋಚರಿಸಿದ್ದು ನೆತ್ತರಿನ ಬಣ್ಣ ತಾನೇ? 4
16. ಗುಡ್ಡೆ ಹಾಕಿದ ಹಣವನ್ನು ಬಚ್ಚಿಡಲು ತಕ್ಕ ಭಾರೀ ಮಡಿಕೆ 3
17. ಕಲಾವಿದನಿಗೆ ಒಪ್ಪವಾಗುವಂತಿದೆ ಈ ಬೆಚ್ಚನ್ನ ಟೊಪ್ಪಿಗೆ 3
18. ಮುಹೂರ್ತವನ್ನು ನಿಶ್ಚಯಿಸಲು ಎಲ್ಲರೂ ಸೇರಿದ್ದೇ ಪ್ರಸ್ತುತದ ಸಂಗತಿ 4

ಮೇಲಿಂದ ಕೆಳಕ್ಕೆ:

1. ಈಗಿನ ಈ ನ್ಯಾಯಾಲಯ ಹಿಂದೆ ವಾಸದ ಮನೆಯೇ ಆಗಿತ್ತು 3
2. ರಾಣಿಯರೇ ಆಗಿದ್ದರೂ ಅಷ್ಟೇ, ಎಲ್ಲರಿಗೂ ಇದೊಂದೇ ಭೂಮಿ 3
3. ಭಾರೀ ಗಡ್ಡ ಬೆಳೆಸಿ ಬಂದಿದ್ದಾನೆ ದೈತ್ಯ ವ್ಯಕ್ತಿ 3
5. ಅಲ್ಲಿ ನೆರೆದಿದ್ದ ಎಲ್ಲರ ಒಮ್ಮತದ ತೀರ್ಮಾನ ಹೀಗೆ 3
6. ಬಾಳಿಕೆ ಬರುವಂಥದಲ್ಲ ಬಿಡಿ, ತುಳಿದು ನಡೆಸುವ ಆಡಳಿತ 4
7. ಕಾಳು ಮಾರಲು ಬಂದಿದ್ದಾತನಿಂದಲೇ ನಡೆದದ್ದು ಈ ಚೌರ್ಯ 4
8. ಕೆಟ್ಟ ಚಟಕ್ಕೆ ಇಳಿದವರ ಕೆಲಸಗಳೆಲ್ಲ ಬರೀ ಬೇಕಾಬಿಟ್ಟಿ 4
9. ಸುಮ್ಮನಾಗಲು ಸೂಚಿಸಲೆಂದು ಈ ಮಂದಹಾಸ 4
11. ಗುರುತೇ ಸಿಗದಂತೆ ಒಣಗಿಹೋಗಿದೆ ಎಲೆ 3
13. ವಾರಾಂತ್ಯಕ್ಕೆ ಎಲ್ಲವನ್ನೂ ತ್ಯಜಿಸಿದವನಾಗಿ ತಲೆಕೆಳಕಾದ 3
14. ಪುರಾಣ ವಾಚನದ ನಡುನಡುವೆ ಕೇಳಿಸಿದ್ದು ಓಂಕಾರ 3
15. ಶಂಕರನ ದರ್ಶನಕ್ಕೆ ಹೊರಟಾಗ ಕಂಡದ್ದು ಶುಭ ಸೂಚಕ ನಿಮಿತ್ತ 3

## 21–01–2021 ಉತ್ತರಗಳು

ಎಡದಿಂದ ಬಲಕ್ಕೆ:

1. ಪ್ರತಾಪ 3. ವಿಕಾಸ 4. ತಳಿರು 6. ಅಮಾಯಕ 7. ಕಲುಷಿತ 9. ನಗನಾಣ್ಯ 11. ಸಮರ್ಪಕ 15. ತನಕ 16. ಕಿನ್ನರ 17. ವಸಂತ

ಮೇಲಿಂದ ಕೆಳಕ್ಕೆ:

1. ಪ್ರಸನ್ನ 2. ಪತನ 3. ವಿಸ್ಮಯ 5. ರುಮಾಲು 6. ಅಧೀನ 8. ತವಕ 10. ನಾಚಿತ 12. ಮಧುರ 13. ಕಕವ 14. ಅಂಕಿತ

ಪ್ರಶ್ನಾಂಕಣ

# ಸ್ಟಾರ್ಕ್ ಮತ್ತು ಕ್ರೇನ್: ಏನು ಅಂತರ?

ಸ್ಟಾರ್ಕ್ ಮತ್ತು ಕ್ರೇನ್: ಇವೆರಡೂ ಭಾರೀ ಗಾತ್ರದ ಹಕ್ಕಿಗಳು. ಉದ್ದನ್ನ ಕತ್ತು, ಉದ್ದನ್ನ ಕಾಲುಗಳು, ಭಾರೀ ವೈಶಾಲ್ಯದ ರೆಕ್ಕೆಗಳು ಮತ್ತು ಎತ್ತರದ ನಿಲುವು ಈ ಸಾಮಾನ್ಯ ಬಾಹ್ಯ ಲಕ್ಷಣಗಳಿಂದಾಗಿ ಅವೆರಡೂ ಮೇಲ್ನೋಟಕ್ಕೆ ಒಂದೇ ರೀತಿ ಕಾಣುತ್ತವೆ. ಅದಕ್ಕೇ ಈ ಎರಡೂ ವಿಧ ಹಕ್ಕಿಗಳನ್ನೂ ಕೊಕ್ಕರೆ ಎಂಬ ಒಂದೇ ಹೆಸರಿನಿಂದಲೇ ಕರೆವ ಪರಿಪಾಟ ಇದೆ. ಆದರೆ, ವಾಸ್ತವವಾಗಿ ಸ್ಟಾರ್ಕ್ (ಚಿತ್ರ 1, 3) ಮತ್ತು ಕ್ರೇನ್ (ಚಿತ್ರ 2)ಗಳ ನಡುವೆ ಹಲವಾರು ಅಂತರಗಳಿವೆ:

- ವೈಜ್ಞಾನಿಕವಾಗಿ ಸ್ಟಾರ್ಕ್ ಮತ್ತು ಕ್ರೇನ್ ಇವೆರಡೂ ಹಕ್ಕಿಗಳು ಬೇರೆ ಬೇರೆ ವರ್ಗಗಳಿಗೆ, ಬೇರೆ ಬೇರೆ ಕುಟುಂಬಗಳಿಗೆ ಸೇರಿವೆ. ಸ್ಟಾರ್ಕ್ ಗಳಲ್ಲಿ ಹತ್ತೊಂಬತ್ತು ಪ್ರಭೇದಗಳಿವೆ; ಕ್ರೇನ್‌ಗಳಲ್ಲಿ ಹದಿನೈದು ಪ್ರಭೇದಗಳಿವೆ.
- ಸ್ಟಾರ್ಕ್ ಗಳು ಅಂಟಾರ್ಕ್ಟಿಕಾ, ಉತ್ತರ ಅಮೆರಿಕ ಮತ್ತು ಆಸ್ಟ್ರೇಲಿಯಾ ಖಂಡಗಳನ್ನು ಬಿಟ್ಟು ಉಳಿದೆಲ್ಲ ಭೂ ಖಂಡಗಳಲ್ಲೂ ಇವೆ. ಕ್ರೇನ್‌ಗಳು ಅಂಟಾರ್ಕ್ಟಿಕಾ ಮತ್ತು ದಕ್ಷಿಣ ಅಮೆರಿಕ ಖಂಡಗಳಲ್ಲಿ ಮಾತ್ರ ಇಲ್ಲ. ಸ್ಟಾರ್ಕ್‌ಗಳದು ಹುಲ್ಲು ಬಯಲು, ಪರ್ವತಾವಾರ ಇತ್ಯಾದಿ ಒಣ ಪ್ರದೇಶಗಳಲ್ಲಿ ಮಾತ್ರ ವಾಸ್ತವ್ಯ. ಕ್ರೇನ್‌ಗಳದು ಜೌಗು ನೆಲ ಮತ್ತು ಕೆರೆ, ನದಿ, ಸರೋವರ ಇತ್ಯಾದಿ ನೀರ ಸನಿಹದ ಪ್ರದೇಶಗಳಲ್ಲಿ ಪ್ರಮುಖ ನೆಲೆ.
- ಸ್ಟಾರ್ಕ್‌ಗಳು ಮಾಂಸಾಹಾರೀ ಹಕ್ಕಿಗಳು; ಅವು ಕೀಟ, ಹುಳು, ಕಪ್ಪೆ, ಮತ್ಸ್ಯ, ಸರೀಸೃಪ ಮತ್ತಿತರ ಪುಟ್ಟ ಪ್ರಾಣಿಗಳನ್ನು ಹಿಡಿದು ತಿನ್ನುತ್ತವೆ. ಆದರೆ ಕ್ರೇನ್‌ಗಳು ಮಿಶ್ರಾಹಾರಿಗಳು. ಅವು ಮಾಂಸಾಹಾರದ ಜೊತೆಗೆ ಕಾಳುಗಳನ್ನೂ, ಹಣ್ಣುಗಳನ್ನೂ ಸೇವಿಸುತ್ತವೆ.




- ಸ್ಟಾರ್ಕ್‌ಗಳು ಮೂಕ ಹಕ್ಕಿಗಳು. ಎಂದರೆ ಅವುಗಳಿಗೆ ಧ್ವನಿ ಇಲ್ಲ. ಆದರೆ ಕ್ರೇನ್‌ಗಳು ಹಲವಾರು ವಿಧಗಳ ಜೋರಾದ ಧ್ವನಿ ಸಂಕೇತಗಳನ್ನು ಹೊರಡಿಸುತ್ತವೆ. ಸಂತಾನ ಕಾಲದಲ್ಲಿ ಸ್ಟಾರ್ಕ್‌ಗಳು ಕಡ್ಡಿಗಳನ್ನು ಗುಡ್ಡೆ ಮಾಡಿದ ಭಾರೀ ಗೂಡುಗಳನ್ನು ವೃಕ್ಷಗಳಲ್ಲಿ (3) ಬಂಡೆಗಳ ಮೇಲೆ ಮತ್ತು ಕಟ್ಟಡಗಳ ಚಾವಣಿಗಳ ಮೇಲೆ (1) ಮರಿಗಳಿಗಾಗಿ ನಿರ್ಮಿಸುತ್ತವೆ. ಕ್ರೇನ್‌ಗಳು ಕಡ್ಡಿಗಳನ್ನು ರಾಶಿ ಮಾಡಿದ ತೇಲು ಗೂಡುಗಳನ್ನು ಕಡಿಮೆ ಆಳದ ನೀರಿನ ಮೇಲೆ ರಚಿಸುತ್ತವೆ.
- ಬಹುಪಾಲು ಎಲ್ಲ ಸ್ಟಾರ್ಕ್ ಪ್ರಭೇದಗಳೂ ಪ್ರತಿ ವರ್ಷ ವಲಸೆ ಹೋಗುತ್ತವೆ ಆದರೆ, ಕ್ರೇನ್‌ಗಳ ಕೆಲವೇ ಪ್ರಭೇದಗಳು ಮಾತ್ರ ಪ್ರತಿ ವರ್ಷ ವಲಸೆ ಪಯಣವನ್ನು ಕೈಗೊಳ್ಳುತ್ತವೆ.

■ ಎನ್. ವಾಸುದೇವ್